ದಿಃ **28.02.2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **5** ಪರ ವಕೀಲರಾದ ಶ್ರೀ ಎಮ್.ಎನ್.ಸಿ ಅವರಿಂದ:

1) ನಾನು ಈ ದಾವೆಯನ್ನು ನನಗೆ ದಾವಾ ಜಮೀನು ಮತ್ತು ಮನೆಯಲ್ಲಿ ಪಾಲು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ನಾನು ಕೆ.ಎಸ್.ಆರ್.ಪಿ ಯಲ್ಲಿ ಸೇವೆ ಸಲ್ಲಿಸಿ ನಿವೃತ್ತನಾಗಿರುತ್ತೇನೆ ಎಂದರೆ ಸರಿ. 1993 ರಲ್ಲಿ ನಾನು ಸೇವೆಗೆ ಸೇರಿರುತ್ತೇನೆ. 1993 ರಿಂದ ನಾನು ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿವೃತ್ತನಾಗುವವರೆಗೂ ಸಹ ನಾನು ಬೆಂಗಳೂರಿನಲ್ಲಿಯೇ ವಾಸವಾಗಿದ್ದೆ ಎಂದರೆ ಸರಿ.

2) ಬೆಂಗಳೂರಿನಲ್ಲಿ ನನಗೆ ಸೇರಿದ ಸ್ವಂತ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು 1 ಎಕರೆ 1 ಗುಂಟೆ ಜಮೀನನ್ನು ನಾನು ಪ್ರತಿವಾದಿ 1 ರವರ ಗಂಡ ಮಲ್ಲಪ್ಪ ಸೊಬರದ ರವರಿಗೆ ರೂ.1,40,000/- ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡು ಪ್ರತಿವಾದಿ 1 ರವರ ಗಂಡನ ಕಡೆಯಿಂದ ರೂ.1,00,000/-ಮುಂಗಡ ಹಣವನ್ನು ದಿ:23.04.2003 ರಂದು ಪಡೆದು ಕ್ರಯ ಕರಾರು ಪತ್ರ ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ.

3) ನಾನು ಕರ್ತವ್ಯವನ್ನು ಸರಿಯಾಗಿ ಮಾಡದೇ ಇರುವ ಕಾರಣ ನನ್ನ ಮೇಲಾಧಿಕಾರಿಗಳು ನನಗೆ ವಜಾಗೊಳಿಸಿದ್ದರು ಎಂದರೆ ಸರಿಯಲ್ಲ. ನನಗೆ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನನ್ನು ವಜಾಗೊಳಿಸಿದ ನಂತರ ನನ್ನ ಕುಟುಂಬ ನಿಭಾಯಿಸುವುದು ನನಗೆ ತೊಂದರೆಯಾಗಿತ್ತು ಎಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರವರ ಗಂಡನ ಕಡೆಯಿಂದ ಉಳಿದ ರೂ.40,000/- ಹಣವನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿ 1 ರವರ ಗಂಡನಿಗೆ ಮಾಡಿಕೊಟ್ಟ ಕ್ರಯ ಕರಾರು ಪತ್ರದನ್ವಯ ಶುದ್ಧ ಕ್ರಯ ಪತ್ರವನ್ನು ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

4) ದಾವಾ ಅನುಸೂಚಿ-1 ರ ರಿ.ಸ.ನಂ:12/1 ರ ಜಮೀನಿನಲ್ಲಿ ನಮ್ಮ ಕುಟುಂಬಕ್ಕೆ 2 ಎಕರೆ 2 ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಿಡಕಲ್ ಡ್ಯಾಂ ಇವರ ಆದೇಶ ನಂ:ಎಲ್.ಎ.ಕ್ಯೂ/ಜೆ.ಎಸ್.ಆರ್ 1390/789 ರಂತೆ ದಿ:30.01.2016 ರ ಪ್ರಕಾರ ದಾವಾ ಅನುಸೂಚಿ 1 ಮತ್ತು ರಿ.ಸ.ನಂ:12/2, 12/3, 12/4, 12/5 ಎ ಮತ್ತು 12/5 ಬಿ ಜಮೀನುಗಳ ಪೈಕಿ 36 ಗುಂಟೆ ಜಮೀನನ್ನು ಕರ್ನಾಟಕ ನೀರಾವರಿ ನಿಗಮಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5) ದಾವಾ ಸ್ವತ್ತಿನ ಪೈಕಿ ಜಮೀನನ್ನು ಕರ್ನಾಟಕ ನೀರಾವರಿ ನಿಗಮದವರು ಸ್ವಾಧೀನಪಡಿಸಿಕೊಂಡಿದ್ದರೂ ನನಗೆ ಗೊತ್ತಿದ್ದರೂ ಸಹ ಸ್ವಾಧೀನಪಡಿಸಿಕೊಂಡ ಜಮೀನನ್ನು ಹೊರತುಪಡಿಸಿ ನಾನು ಈ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಭೂಸ್ವಾಧೀನಪಡಿಸಿಕೊಂಡಿರುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6) ಈ ದಾವೆ ಸಲ್ಲಿಸುವ ಸಮಯದಲ್ಲಿ ದಾವಾ ಅನುಸೂಚಿ 1 ರ ಜಮೀನಿನ ಪಹಣಿ ಪತ್ರಿಕೆಯನ್ನು ನಾನೇ ತೆಗೆಯಿಸಿ ವಕೀಲರಿಗೆ ನೀಡಿರುತ್ತೇನೆ ಎಂದರೆ ಸರಿ. ನಿಪಿ.1 ರ ಪಹಣಿ ಪತ್ರಿಕೆಯಲ್ಲಿ ಬರೆದ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನೀರಾವರಿ ನಿಗಮದವರು ದಾವಾ ಸ್ವತ್ತಿನಲ್ಲಿನ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುವ ಕುರಿತು ನಿಪಿ.1 ರ ದಾಖಲೆಯಲ್ಲಿ ಉಲ್ಲೇಖವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನೀರಾವರಿ ನಿಗಮದವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನ್ನ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ಸದರಿ ನೀರಾವರಿ ನಿಗಮದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

7) ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ನಾನು ಪ್ರತಿವಾದಿಯರೊಂದಿಗೆ ಜಂಟಿಯಾಗಿ ವಾಸವಾಗಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯರ ಕುಟುಂಬದ ಪಡಿತರ ಚೀಟಿಯನ್ನಾಗಲಿ, ನನ್ನ ಮತ್ತು ಪ್ರತಿವಾದಿಯರ ಮತದಾರರ ಪಟ್ಟಿಯನ್ನು ಈ ದಾವೆಯಲ್ಲಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿದ ಪ್ರಮಾಣಪತ್ರದ ಖಂಡಿಕೆ 4 ರಲ್ಲಿ ನಾನು ಮತ್ತು ಪ್ರತಿವಾದಿಯರು ಜಂಟಿಯಾಗಿ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ಬೆಳಗಳನ್ನು ಬೆಳೆದಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ.

8) ರಿ.ಸನಂ:496/2, 495/2+6 ಬ, 502/9 ರ ಜಮೀನುಗಳು ಪ್ರತಿವಾದಿ 6 ರವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸದಾನಂದ ಬಸಪ್ಪ ಸಬರದ ಎನ್ನುವವರು ಮಮದಾಪೂರ ಗ್ರಾಮದಲ್ಲಿ ಒಬ್ಬರೇ ಇರುತ್ತಾರೆ ಎಂದರೆ ಸರಿ. ಅವರೇ ಪ್ರತಿವಾದಿ 6 ರವರು ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 6 ರವರನ್ನು ಹೊರತುಪಡಿಸಿ ಮಮದಾಪೂರ ಗ್ರಾಮದಲ್ಲಿ ಸದಾನಂದ ಬಸಪ್ಪ ಸಬರದ ಎನ್ನುವವರು ಬೇರೆ ಯಾರು ಇರುವುದಿಲ್ಲ ಎಂದರೆ ಸರಿ.

ರಿ.ಸ.ನಂ:496/2, 495/2+6ಬ ಮತ್ತು 502/9 ರ ಜಮೀನುಗಳನ್ನು ಈ ದಾವೆದಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತ: ಮುಂದುವರೆದು ಪ್ರತಿವಾದಿ 6 ರವರ ಹೆಸರಿನಲ್ಲಿ ಮೇಲಿನ ಜಮೀನಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ದಿಃ **24.01.2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಹಾಜರಪಡಿಸಿದ್ದು, ಅದನ್ನು ನಿಪಿ.1 ಎಂದು, ದಾವಾ ಮನೆಗೆ ಸಂಬಂಧಿಸಿದ ಉತಾರೆ ಹಾಜರಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.